ಆ) ಈ ರಾಷ್ಟ್ರೀಯ ಹೆದ್ದಾರಿ–2012ರಲ್ಲಿ ಮೈಸೂರು–ನಂಜನಗೂಡು ವರೆಗಿನ ರಸ್ತೆಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ಮಾಡಲು ಸರ್ಕಾರವು ಉದ್ದೇಶಿಸಿರುವುದೇ;

ಇ) ಹಾಗಿದ್ದಲ್ಲಿ, ಈವರೆಗೆ ಸಕಾರ ಕೈಗೊಂಡಿರುವ ಕ್ರಮಗಳೇನು;

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ರಾಷ್ಟ್ರೀಯ ಹೆದ್ದಾರಿ–2012ರಲ್ಲಿ ಮೈಸೂರು–ನಂಜನಗೂಡು ವರೆಗಿನ ರಸ್ತೆಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ಮಾಡಲು ಯೋಜಿಸಿದ್ದು ಪ್ರಸ್ತುತ ಸದರಿ ರಸ್ತೆಯನ್ನು ಎರಡು ಪಥದ ರಸ್ತೆಯಾಗಿ ಅಭಿವೃದ್ಧಿಪಡಿಸಲು ಕೇಂದ್ರ ಭೂಸಾರಿಗೆ ಮಂತ್ರಾಲಯವು ಎನ್.ಹೆಚ್.ಡಿ.ಪಿ. IVA ಯೋಜನೆಯಡಿಯಲ್ಲಿ ಸಾರ್ವಜನಿಕ ಸಹಭಾಗಿತ್ವ (ಪಿ.ಪಿ.ಪಿ.)ದ ಆಧಾರದ ಮೇಲೆ ತೆಗೆದುಕೊಳ್ಳಲು ಕ್ರಮಕೈಗೊಂಡಿರುತ್ತದೆ.

ಇ)* ಸಾರ್ವಜನಿಕ ಸಹಭಾಗಿತ್ವದ ಆಧಾರದ ಮೇಲೆ ಕಾಮಗಾರಿ ಕೈಗೆತ್ತಿಕೊಳ್ಳಲು ಅವಶ್ಯವಿರುವ ಅಂಶಗಳಾದ ಸಲಹೆಗಾರರ ನೇಮಕಾತಿ, ಕಾರ್ಯಸಾಧ್ಯ ವರದಿ ತಯಾರಿಸುವುದು, ಗುತ್ತಿಗೆದಾರರ (Concessionaire) ತಾಂತ್ರಿಕ ಪೂರ್ವಾರ್ಹತೆ (RFQ) ಇತ್ಯಾದಿಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ Standing Finance Committee (S.F.C.) ಅನುಮೋದನೆ ಪಡೆದ ನಂತರ ಅಂತಿಮವಾಗಿ ಗುತ್ತಿಗೆದಾರರನ್ನು (Concessionaire) ಗೊತ್ತುಪಡಿಸಿ (R.F.P.) ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಬೇಕಿದೆ.

ತೋಟಗಾರಿಕಾ ಮಿಷನ್

528(629) ಶ್ರೀ ಮಂಜು.ಎ (ಅರಕಲಗೂಡು) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ತೋಟಗಾರಿಕಾ ಮಿಷನ್ ಯೋಜನೆಯಡಿಯಲ್ಲಿ ಎಷ್ಟು ಹಣವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ;

ಆ) ಇದರಲ್ಲಿ ಅರಕಲಗೂಡು ಮತಕ್ಷೇತ್ರಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) 2005–06 ರಿಂದ ಫೆಬ್ರವರಿ 2010ರವರೆಗೆ ಬಿಡುಗಡೆಯಾದ ಹಣ;

The Amount released from 2005-06 to February 2010;

ಕೇಂದ್ರ ಸರ್ಕಾರ	ರೂ.1621.57
ರಾಜ್ಯ ಸರ್ಕಾರ	ರೂ.195.77
ಒಟ್ಟು :	**ರೂ.1817.34**

ಆ) ರೂ. 185.61 ಲಕ್ಷ.
Rs. 185.61 lakhs.

ಸರ್ಕಾರೇತರ ಸಂಘ ಸಂಸ್ಥೆಗಳು

529 (770) ಶ್ರೀ ಹೆಚ್.ಪಿ. ಮಂಜುನಾಥ್ (ಹುಣಸೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನಲ್ಲಿರುವ ಸರ್ಕಾರೇತರ ಸಂಘ ಸಂಸ್ಥೆಗಳ ಮತ್ತು ಸಹಕಾರ ಸಂಘಗಳ ಸಂಖ್ಯೆ ಎಷ್ಟು? (ಅವುಗಳ ಹೆಸರು, ವಿಳಾಸ ಮತ್ತು ಸಂಸ್ಥೆಯ ಮುಖ್ಯ ಕಾರ್ಯಚಟುವಟಿಕೆ ಬಗ್ಗೆ ವಿವರ ನೀಡುವುದು);

ಆ) ಈ ಸಹಕಾರ ಸಂಘಗಳ ಹಾಗೂ ಸಂಸ್ಥೆಗಳ ಕಾಯ್ದೆಗಳಡಿ ಯಾವುದಾದರೊಂದು ಸಹಕಾರಿ ಸಂಘ ಅಥವಾ ಸಂಘ ಸಂಸ್ಥೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಖಾತರಿಪಡಿಸಲು ನಿಗದಿ ಪಡಿಸಿರುವ ಮಾನದಂಡಗಳು ಅಥವಾ ನಿಗದಿಪಡಿಸಿರುವ ನಿಯಮಗಳೇನು?